

# ಗೊಂಬೆಗೆ ಜೀವ ಬಂದು...

ಹಾರರ್ ಸಿನಿಮಾಗಳ ಮಿತಿಯಲ್ಲಿಯೇ ಗಮನಸೆಳೆಯುವ ಕಿರುಚಿತ್ರವಿದು. ನಿರೂಪಣೆಯಲ್ಲಿ ನಾನ್ ಲೀನಿಯರ್ ತಂತ್ರವನ್ನು ಬಳಸಿಕೊಂಡಿರುವ ನಿರ್ದೇಶಕರು ಗುಟ್ಟು ಬಿಟ್ಟುಕೊಡುತ್ತಲೇ ರೋಮಾಂಚನ ಹುಟ್ಟಿಸುತ್ತಾರೆ.

■ ಗೌರಿ

ಜನರು ಖುಷಿಯನ್ನಷ್ಟೇ ಅಲ್ಲ, ಕಲ್ಪಿತ ಭಯವನ್ನೂ ಇಷ್ಟಪಡುತ್ತಾರೆ. ಹಾಗಾಗಿಯೇ ಸಿನಿಮಾ ಜಗತ್ತಿನಲ್ಲಿ ಹಾರರ್ ಜಾನರ್ ಎನ್ನುವುದು ಬಹುಜನಪ್ರಿಯ ಪ್ರಕಾರ. ಜನರನ್ನು ಭಯಬೀಳಿಸಲು ಎಷ್ಟು ಸಾವಿರ ಪ್ರಯತ್ನಗಳು ನಡೆದಿವೆಯೆಂದರೆ ಹಾರರ್ ಜಾನರ್‌ನಲ್ಲಿ ಹೊಸದೇನೂ ಮಾಡಲು ಸಾಧ್ಯವೇ ಇಲ್ಲವೇನೋ ಅನ್ನಿಸುವಷ್ಟು.

ಭಯ ಬೀಳಿಸುವ ಕಥೆಗಳ ಚೌಕಟ್ಟು ಅದೇ ಇರಬಹುದು. ಆದರೆ ಅದನ್ನು ಇಟ್ಟುಕೊಂಡು ಹೊಸ ಹೊಸ ತಂತ್ರ – ತಂತ್ರಜ್ಞಾನಗಳನ್ನ ಬಳಸಿಕೊಂಡು ಬೆಚ್ಚಿಬೀಳಿಸುವ ಪ್ರಯತ್ನಗಳು ನಡೆದೇ ಇವೆ. ಈ ಪ್ರಯತ್ನಗಳು ಮತ್ತೆ ಅವುಗಳಿಗೆ ಸಿಗುವ ಯಶಸ್ಸು ಇನ್ನೂ ಮುಗಿದಿಲ್ಲ ಎನ್ನುವುದಕ್ಕೆ ಪುರಾವೆಯಂತಿದೆ ‘ಡಾಲ್ ಡಿಸ್ಟಾರ್ಟೆಡ್’ ಕಿರುಚಿತ್ರ. ನೈಲ್ ಶುಕ್ಲಾ ಈ ಕಿರುಚಿತ್ರದ ನಿರ್ದೇಶಕ. ನಿರ್ದೇಶನವಷ್ಟೆ ಅಲ್ಲ, ಕಥೆ ಚಿತ್ರಕಥೆ, ಛಾಯಾಗ್ರಹಣ, ಸಂಗೀತ, ಧ್ವನಿ ವಿನ್ಯಾಸ, ವಿಪಿಎಕ್ಸ್ ಎಲ್ಲವನ್ನೂ ಅವರೇ ನಿರ್ವಹಿಸಿದ್ದಾರೆ.

ಕಥಾ ಚೌಕಟ್ಟಿನಲ್ಲಿ ತೀರಾ ವಿಶೇಷವೇನಿಲ್ಲ. ನಾಯಕಿಯ ಭಗ್ನಪ್ರೇಮದ ದುಃಖದ ನಿರೂಪಣೆಯೊಂದಿಗೇ ಈ ಕಿರುಚಿತ್ರ ಶುರುವಾಗುತ್ತದೆ. ನಾಯಕಿಯ ಪ್ರಿಯಕರ ಬೇರೆ ಮದುವೆಯಾಗಿ ಹೆಂಡತಿ–ಮಕ್ಕಳ ಜೊತೆ ಸುಖವಾಗಿದ್ದಾನೆ. ಅದನ್ನು ನೋಡಿ ನೊಂದ ನಾಯಕಿ ಅವನದೇ ಧ್ಯಾನದಲ್ಲಿ ಒಂದು ಗೊಂಬೆಯನ್ನು ತರಿಸಿಕೊಂಡು ಆ ಗೊಂಬೆಯೇ ತನ್ನ ಪ್ರಿಯಕರ ಎಂದು ತಿಳಿದು ಮನೆಯಲ್ಲಿ ಏಕಾಂಗಿಯಾಗಿ ದುಃಖಿಸುತ್ತಿರುತ್ತಾಳೆ. ಹೀಗೆ ಶುರುವಾಗುವ ಚಿತ್ರ ಗೊಂಬೆಗೆ ಜೀವ ಬರುವುದರ ಜೊತೆಗೆ ಭಯಾನಕತೆಯ ಹಾದಿಗೆ ಹೊರಳಿಕೊಳ್ಳುತ್ತದೆ.



**ಹೆಸರು:** ಡಾಲ್ ಡಿಸ್ಟಾರ್ಟೆಡ್
**ನಿರ್ದೇಶನ:** ನೈಲ್ ಶುಕ್ಲಾ
**ತಾರಾಗಣ:** ನಿಕ್ಕಿ ಬ್ರಿಗ್ಟನ್, ಕೋರಿ ಸ್ಟಕೆರಿ, ಕೇಯ್ಲ್ ಜೇಮ್ಸ್

ಮೈ ನವಿರೇಳಿಸುವ ಕ್ಷಣಗಳನ್ನು ಫ್ರೀಝ್ ಆಗಿ ತೋರಿಸುವ ಮೂಲಕ ಅದರ ಪರಿಣಾಮವನ್ನು ಹೆಚ್ಚಿಸುವ ತಂತ್ರವನ್ನು ನಿರ್ದೇಶಕರು ಮಾಡಿದ್ದಾರೆ. ಈ ಉಪಾಯ ಅಷ್ಟೊಂದು ಫಲಿಸಿದಂತಿಲ್ಲ. ಆದರೆ ಈ ಕಿರುಚಿತ್ರ ಪರಿಣಾಮಕಾರಿ ಅನಿಸುವುದು ದ್ವಿತೀಯಾರ್ಧದಲ್ಲಿ, ಗುಟ್ಟು ಬಿಡಿಸುವ ಪರಿಯಲ್ಲಿ. ದುಃಖವೆನ್ನುವುದು ಒಂದು ರೋಗವಾಗಿ, ಅದರಿಂದ ಆ ಹುಡುಗಿ ಎಸಗಿರುವ ಪಾತಕವನ್ನು ನಿರ್ದೇಶಕರು ಭೀಕರವಾಗಿ ಬಿಚ್ಚಿಡುತ್ತಾರೆ. ಇದಕ್ಕಾಗಿ ಅವರು ನಾನ್ ಲೀನಿಯರ್ ತಂತ್ರವನ್ನು ಜಿಗ್‌ಜಾಗ್ ಹೊಲಿಗೆಯ ಥರ ಹೆಣೆದು ಬಳಸಿದ್ದಾರೆ. ವರ್ತಮಾನ, ಕಲ್ಪನೆ, ಭೂತಕಾಲಗಳ ಎಳೆಗಳು ಒಂದೇ ಸಲಕ್ಕೆ ಗಂಟು ಬಿಚ್ಚಿಕೊಳ್ಳುತ್ತ ಒಂದಕ್ಕೊಂದು ಖೋ ಕೊಟ್ಟುಕೊಳ್ಳುತ್ತ ಭೀಕರ ದೃಶ್ಯವನ್ನು ಅನಾವರಣಗೊಳಿಸುತ್ತಾರೆ. ಅಸ್ಪಷ್ಟ ದೃಶ್ಯಾವಳಿಗಳ ಮೂಲಕವೇ ಪಾತಕದ ಸ್ಪಷ್ಟಚಿತ್ರ ಕೊಡುತ್ತಾರೆ. ಕಿರುಚಿತ್ರ ನಮಗೆ ರೋಮಾಂಚಕಾರಿ ಅನುಭವ ಕೊಡುವುದು ಈ ಹಂತದಲ್ಲಿಯೇ.

ಚಿಕ್ಕಮಕ್ಕಳನ್ನು ಪಕ್ಕದಲ್ಲಿ ಕೂಡಿಸಿಕೊಂಡು ನೋಡುವ ಕಿರುಚಿತ್ರ ಖಂಡಿತ ಇದಲ್ಲ. ಕಾಮ, ರಕ್ತ, ಹಿಂಸೆ ಎಲ್ಲವೂ ಅತಿರೇಕದ ಗೆರೆಯ ಮೇಲೇ ನಿಂತು ನರ್ತಿಸುತ್ತವೆ. ಅದರ ನರ್ತನಕ್ಕೆ ತಕ್ಕ ಹಾಗೆಯೇ ಧ್ವನಿ ವಿನ್ಯಾಸವೂ ಕೂಡಿದೆ. ಸಣ್ಣ ಜಾಗದಲ್ಲಿಯೇ ಭಯವನ್ನು ಹುಟ್ಟಿಸಲು ಕತ್ತಲು ಬೆಳಕಿನ ಸಮರ್ಥ ಬಳಕೆಯನ್ನು ಛಾಯಾಗ್ರಹಣದಲ್ಲಿ ಮಾಡಿಕೊಂಡಿದ್ದಾರೆ.

ಹಾರರ್ ಸಿನಿಮಾಗಳನ್ನು ತುಂಬ ಇಷ್ಟಪಟ್ಟು ನೋಡುವವರಿಗೆ, ಹಾಗೆಯೇ ಹಾರರ್ ಸಿನಿಮಾಗಳನ್ನು ಮಾಡುವ ಸಿನಿಕರ್ಮಿಗಳಿಗೆ ಈ ಕಿರುಚಿತ್ರ ಖಂಡಿತ ಒಂದಿಷ್ಟು ಹೊಸ ಐಡಿಯಾಗಳನ್ನು ಕೊಡುತ್ತದೆ. ಹಾಗೆಯೇ ತುಸು ಹೇವರಿಕೆಯನ್ನೂ ಹುಟ್ಟಿಸುತ್ತದೆ. ಹೇವರಿಕೆ ಅನ್ನುವುದೂ ಬಹುತೇಕ ಹಾರರ್ ಸಿನಿಮಾಗಳ ಒಂದು ಭಾಗವೇ ಆಗಿರುವುದರಿಂದ ಅದನ್ನು ಒಪ್ಪಿಕೊಳ್ಳದೇ ವಿಧಿಯಿಲ್ಲ.

ಈ ಕಿರುಚಿತ್ರ ವೀಕ್ಷಣೆಗೆ bit.ly/35S38Gn ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.